ಬಿ.ಎಂ.ಟಿ.ಸಿ. ಬಸ್ಸುಗಳು

279 (2184), ಶ್ರೀ ವಿಜಯ ಕುಮಾರ್ ಬಿ.ಎನ್. (ಜಯನಗರ)

ಅ) ಬಿ.ಎಂ.ಟಿ.ಸಿ. ವೋಲ್ವೋ, ವಾಯುವಜ್ರ ಹಾಗೂ ನರ್ಮ್ ಯೋಜನೆಯಡಿ ಎ.ಸಿ. ವಾಹನಗಳ ಸಂಖ್ಯೆ ಎಷ್ಟು (ವಿವರಗಳನ್ನು ಘಟಕವಾರು ನೀಡುವುದು); ಇವುಗಳನ್ನು ಯಾವಾಗ ಖರೀದಿ ಮಾಡಲಾಗಿತ್ತು; ಯಾವ ಯಾವ ಕಂಪನಿಗಳ ಬಸ್ಸುಗಳು ಇವೆ; ಬಸ್ಸುಗಳ ಖರೀದಿ ದರದವಾರು ಮಾಹಿತಿ ನೀಡುವುದು ಹಾಗೂ ಇದಕ್ಕಾಗಿ ನಿಗಮ ಎಷ್ಟು ಸಾಲ ಮಾಡಲಾಗಿದೆ.

ಆ) ಈ ವಾಹನಗಳ ಸಂಚಾರದಿಂದ ನಿಗಮಕ್ಕೆ ನಷ್ಟ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಕಾರಣಗಳೇನು;

ಇ) ಇವುಗಳ ಬಸ್ ದರಗಳನ್ನು ಕಳೆದ ಮೂರು ವರ್ಷಗಳಿಂದ ಎಷ್ಟು ಬಾರಿ ಪರಿಷ್ಕರಣೆ ಮಾಡಲಾಗಿದೆ, ಆದರೂ ನಷ್ಟ ಅನುಭವಿಸುತ್ತಿರುವುದು ನಿಜವೇ;

ಈ) ಪುನಃ ಬಿ.ಎಂ.ಟಿ.ಸಿ. ಬಸ್ಸುಗಳನ್ನು ಖರೀದಿಸಲು ಉದ್ದೇಶಿಸಿದೆಯೇ, ದುಬಾರಿ ವಾಹನಗಳ ಸಂಚಾರದಲ್ಲಿ ಪ್ರಯಾಣಿಕರು ಇಲ್ಲದಿರುವುದರ ಬಗ್ಗೆ ಸರ್ಕಾರದ ನಿಲುವೇನು, ಹಾಗಿದ್ದಲ್ಲಿ, ಸಾಮಾನ್ಯ ಬಸ್ಸುಗಳ ನಿಗಮ ಮುಂದಾಗುವುದೆ (ವಿವರ ಒದಗಿಸುವುದು)?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ವೋಲ್ವೋ, ವಾಯುವಜ್ರ ಹಾಗೂ ನರ್ಮ್ ಯೋಜನೆಯಡಿ ಖರೀದಿಸಿರುವ ಎಸಿ ವಾಹನಗಳ ವಿವರಗಳು ಈ ಕೆಳಕಂಡಂತಿವೆ:–

ವರ್ಷ	ಕಂಪನಿ	ಬಸ್ಸುಗಳ ಪ್ರಮಾಣ	ಪ್ರತಿ ವಾಹನದ ವೆಚ್ಚ ₹ ಗಳಲ್ಲಿ
2005–06	ಮೆ॥ ವೋಲ್ವೋ ಬಸ್ಸಸ್ ಇಂಡಿಯ ಪ್ರೈ.ಲಿ.	7	75,59,688/–
2006–07	ಮೆ॥ ವೋಲ್ವೋ ಬಸ್ಸಸ್ ಇಂಡಿಯ ಪ್ರೈ.ಲಿ.	42	76,59,491/–
2007–08	ಮೆ॥ ವೋಲ್ವೋ ಬಸ್ಸಸ್ ಇಂಡಿಯ ಪ್ರೈ.ಲಿ.	26	74,20,475/–
2008–09	ಮೆ॥ ವೋಲ್ವೋ ಬಸ್ಸಸ್ ಇಂಡಿಯ ಪ್ರೈ.ಲಿ.	5	74,20,475/–
		22	71,68,398/–
		114	70,89,114/–
		44	69,35,232/–
		27	70,03,980/–
	ಮೆ॥ ವೋಲ್ವೋ ಬಸ್ಸಸ್ ಇಂಡಿಯ ಪ್ರೈ.ಲಿ. (ನರ್ಮ್)	24	69,35,232/–
	ಒಟ್ಟು	**236**	
2009–10	ಮೆ॥ ವೋಲ್ವೋ ಬಸ್ಸಸ್ ಇಂಡಿಯ ಪ್ರೈ.ಲಿ. (ನರ್ಮ್)	67	78,19,850/–
		65	77,69,850/–
	ಟಾಟಾ ಮಾರ್ಕೋಪೋಲೋ (ನರ್ಮ್)	98	31,00,507/–
	ಒಟ್ಟು	**230**	
2010–11	ಮೆ॥ ವೋಲ್ವೋ ಬಸ್ಸಸ್ ಇಂಡಿಯ ಪ್ರೈ.ಲಿ. (ನರ್ಮ್)	2	77.69.850/–
		3	78,38,906/–
		39	79,42,250/–
	ಒಟ್ಟು	**44**	
2011–12	ಮೆ॥ ವೋಲ್ವೋ ಬಸ್ಸಸ್ ಇಂಡಿಯ ಪ್ರೈ.ಲಿ.	51	78,01,300/–

	ಕರೋನಾ ಬಸ್ ಮ್ಯಾನುಫ್ಯಾಕ್ಚರ್ಸ್ ಪ್ರೈ.ಲಿ.	15	48,49,387/–
	ಒಟ್ಟು	**66**	
2012–13	ಮೆ॥ ವೋಲ್ವೋ ಬಸ್ಸಸ್ ಇಂಡಿಯ ಪ್ರೈ.ಲಿ.	49	78,01,300/–
	ಕರೋನಾ ಬಸ್ ಮ್ಯಾನುಫ್ಯಾಕ್ಚರ್ಸ್ ಪ್ರೈ.ಲಿ.	10	48,94,387/–
	ಒಟ್ಟು	**59**	
2013–14	ಮೆ॥ ವೋಲ್ವೋ ಬಸ್ಸಸ್ ಇಂಡಿಯ ಪ್ರೈ.ಲಿ.	103	85,73,976/–
		3	86,38,976/–
		4	85,73,976/–
	ಒಟ್ಟು	**110**	ಈ 110 ವೋಲ್ವೋ ಬಸ್ಸುಗಳಿಗೆ ಸಂಖ್ಯೆ:ಬೆಂಮಸಾಸಂ/ಸಿಓ/ಸಿಎಂಇ (ಪಿ&ಟಿಪಿ)/98/2012–13, ದಿ:14.03.2013ರಂತೆ ಖರೀದಿ ಆದೇಶ ನೀಡಲಾಗಿದ್ದು, 2013–14ನೇ ಸಾಲಿನಲ್ಲಿ ಸದರಿ ವಾಹನಗಳನ್ನು ಸರಬರಾಜು ಮಾಡಲಾಗಿರುತ್ತದೆ.
ಒಟ್ಟು ವಾಹನಗಳು		**820**	

(ಮೇಲ್ಕಂಡ 820 ಬಸ್ಸುಗಳ ಪೈಕಿ 18 ವೋಲ್ವೋ ಬಸ್ಸುಗಳನ್ನು ಬೇರೆ ನಿಗಮಗಳಿಗೆ ನೀಡಲಾಗಿರುತ್ತದೆ ಹಾಗೂ 4 ವೋಲ್ವೋ ಬಸ್ಸುಗಳ ಸೇವೆಯನ್ನು ಹಿಂಪಡೆಯಲಾಗಿದೆ)

ಬೆಂ.ಮ.ಸಾ.ಸಂಸ್ಥೆಯಲ್ಲಿ ಮೇಲ್ಕಂಡ 820 ಬಸ್ಸುಗಳ ಪೈಕಿ ನರ್ಮ್ ಯೋಜನೆಯಡಿ 200 ವೋಲ್ವೋ ಹವಾನಿಯಂತ್ರಿತ ಹಾಗೂ 98 ಟಾಟಾ ಮಾರ್ಕೊಪೋಲೋ ಹವಾನಿಯಂತ್ರಿತ ಬಸ್ಸುಗಳನ್ನು ಖರೀದಿಸಲಾಗಿರುತ್ತದೆ. ಕಂಪನಿವಾರು ವಿವರಗಳು ಈ ಕೆಳಕಂಡಂತೆ ಇರುತ್ತವೆ.

ಕ್ರ ಸಂ.	ಸೇವೆಗಳ ಮಾದರಿ	ಬಸ್ಸುಗಳ ವಿವರ	ಸರಬರಾಜು ಮಾಡಿರುವ ಕಂಪನಿ ಹೆಸರು
1	ವಜ್ರ/ವಾಯುವಜ್ರ ಹವಾನಿಯಂತ್ರಿತ ಸೇವೆ	200	ಮೆ॥ ವೋಲ್ವೋ ಬಸ್ಸಸ್ ಇಂಡಿಯ ಪ್ರೈ. ಲಿ. ರವರಿಂದ ಪೂರ್ಣ ನಿರ್ಮಿತ ಬಸ್ಸುಗಳಾಗಿ ಖರೀದಿಸಲಾಗಿದೆ
2	ಮಾರ್ಕೊಪೋಲೊ ಹವಾನಿಯಂತ್ರಿತ ಸೇವೆ	98	ಮೆ॥ ಟಾಟಾ ಮೋಟಾರ್ಸ್ ರವರಿಂದ ಪೂರ್ಣ ನಿರ್ಮಿತ ಬಸ್ಸುಗಳಾಗಿ ಖರೀದಿಸಲಾಗಿದೆ
	ಒಟ್ಟು	**298**	

ಸಂಸ್ಥೆಯಲ್ಲಿ ಆಚರಣೆಯಲ್ಲಿರುವ ಹವಾನಿಯಂತ್ರಿತ ಬಸ್ಸುಗಳ ಘಟಕವಾರು ಸಂಖ್ಯೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಬಸ್ಸಿನ ಮಾದರಿ	ಘಟಕ–7	ಘಟಕ–13	ಘಟಕ–18	ಘಟಕ–25	ಘಟಕ–28	ಒಟ್ಟು
ವೋಲ್ವೊ ಹವಾ ನಿಯಂತ್ರಿತ ಬಸ್ಸುಗಳು	187	157	42	148	141	**675**
ಟಾಟಾ ಮಾರ್ಕೊ ಪೋಲೊ ಹವಾ ನಿಯಂತ್ರಿತ ಬಸ್ಸುಗಳು	19	24	0	29	26	**98**
ಕರೋನಾ ಹವಾ ನಿಯಂತ್ರಿತ ಬಸ್ಸುಗಳು	–	25	––	–	–	**25**

ಸಂಸ್ಥೆಯಲ್ಲಿ ವೋಲ್ವೋ ವಾಹನಗಳನ್ನು ಖರೀದಿಸಲು ಪ್ರತ್ಯೇಕವಾಗಿ ಸಾಲವನ್ನು ಪಡೆದಿರುವುದಿಲ್ಲ. ವೋಲ್ವೋ ವಾಹನಗಳು ಸೇರಿದಂತೆ ಇತರೆ ಎಲ್ಲಾ ರೀತಿಯ ವಾಹನಗಳನ್ನು ಖರೀದಿಸಲು ಪಡೆದ ಸಾಲದ ವಿವರ ಕೆಳಕಂಡಂತಿದೆ.

ವರ್ಷ	ಸಾಲದ ಮೊತ್ತ (₹ ಕೋಟಿಗಳಲ್ಲಿ)
2009–10	110.00
2010–11	24.00
2011–12	169.00

2012–13	172.50
2013–14	334.50
ಒಟ್ಟು	**810.00**

ಆ) ಪ್ರಸ್ತುತ ಸಾಲಿನಲ್ಲಿ ಅಂದರೆ 2014–15 ರಲ್ಲಿ ಮೇ–2014 ರವರೆಗೆ ವೋಲ್ವೋ ಆಚರಣೆಯಿಂದ ಸಂಸ್ಥೆಯು ₹ 305.58 ಲಕ್ಷಗಳಷ್ಟು ಲಾಭವನ್ನು ಗಳಿಸಿದ್ದು, ಈ ವಾಹನಗಳ ಸಂಚಾರದಿಂದ ಸಂಸ್ಥೆಗೆ ನಷ್ಟ ಉಂಟಾಗಿರುವುದಿಲ್ಲ.

ಇ) ಕಳೆದ 3 ವರ್ಷಗಳಲ್ಲಿ ಸಂಸ್ಥೆಯು ಹವಾನಿಯಂತ್ರಣ ರಹಿತ ಸೇವೆಗಳ ದರಗಳನ್ನು 3 ಬಾರಿ ಹಾಗೂ ಹವಾನಿಯಂತ್ರಣ ಸೇವೆಗಳ ದರಗಳನ್ನು 4 ಬಾರಿ ಪರಿಷ್ಕರಿಸಿರುತ್ತದೆ.

ಭಾರತ ಸರ್ಕಾರವು ಹೆಚ್.ಎಸ್.ಡಿ. ಇಂಧನ ದರಗಳನ್ನು ಪ್ರತಿ ತಿಂಗಳು ನಿರಂತರವಾಗಿ ಹೆಚ್ಚಿಸಿರುವ ಹಿನ್ನಲೆಯಲ್ಲಿ ಹಾಗೂ ಅವಶ್ಯಕ ವಸ್ತುಗಳಾದ ಟೈರು, ಟ್ಯೂಬು, ಲೂಬ್ರಿಕೆಂಟ್, ಅಸೆಂಬ್ಲಿಗಳು ಮತ್ತು ಬಿಡಿಭಾಗಗಳ ದರಗಳಲ್ಲಿಯೂ ಸಹ ಗಣನೀಯ ಏರಿಕೆಯುಂಟಾಗಿರುವುದು, ಮತ್ತು ಸಂಸ್ಥೆಯ ಸಿಬ್ಬಂದಿಗಳಿಗೆ ಜನವರಿ–2014ರ 6% ತುಟ್ಟಿ ಭತ್ಯೆ ಬಿಡುಗಡೆಗೊಳಿಸಿರುವುದರ ಪರಿಣಾಮ ಸಂಸ್ಥೆಯ ಮೇಲೆ ಹೆಚ್ಚಿನ ಆರ್ಥಿಕ ಹೊರೆಯುಂಟಾಗಿ ಸಂಸ್ಥೆಯು ನಷ್ಟ ಅನುಭವಿಸಲು ಕಾರಣವಾಗಿರುತ್ತದೆ.

ಈ) 2014–15ನೇ ಸಾಲಿನ ಕ್ರಿಯಾ ಯೋಜನೆಯನ್ವಯ ಹವಾನಿಯಂತ್ರಿತ ವಾಹನಗಳನ್ನು ಖರೀದಿಸುವ ಪ್ರಸ್ತಾವನೆಗಳು ಇರುವುದಿಲ್ಲ.

ಸಂಸ್ಥೆಯ ಹವಾನಿಯಂತ್ರಿತ ಬಸ್‌ಗಳಲ್ಲಿ ಪ್ರತಿ ಸುತ್ತುವಳಿಗೆ ಸರಾಸರಿ 23 ಜನ ಪ್ರಯಾಣಿಕರಂತೆ ಒಂದು ದಿನಕ್ಕೆ ಸುಮಾರು 1.0 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ. ವೋಲ್ವೋ ವಾಹನಗಳ

ಕಾರ್ಯಾಚರಣೆಯಿಂದ ಸಂಸ್ಥೆಗೆ ಪ್ರತಿದಿನ ಸರಾಸರಿ ₹ 93.71 ಲಕ್ಷ ಆದಾಯ ಬರುತ್ತಿದೆ.

ಪ್ರಸಕ್ತ ಸಾಲಿನ ಕ್ರಿಯಾಯೋಜನೆಯಂತೆ ಸಂಸ್ಥೆಯು 694 ಹವಾನಿಯಂತ್ರಣರಹಿತ ಸಾಮಾನ್ಯ ವಾಹನಗಳನ್ನು ಖರೀದಿ ಮಾಡಲು ತೀರ್ಮಾನಿಸಿರುತ್ತದೆ.

ಬಸ್ ಡಿಪೋ ನಿರ್ಮಾಣ

280 (3930), ಶ್ರೀ ಮಂಕಾಳ ಸುಬ್ಬ ವೈದ್ಯ (ಭಟ್ಕಳ)

ಅ) ಉತ್ತರ ಕನ್ನಡ ಜಿಲ್ಲೆ ಭಟ್ಕಳ ಬಸ್ ಡಿಪೋ ಸ್ಥಳಾಂತರ ಮಾಡಲು ಟೆಂಡರ್ ಆಗಿದ್ದರೂ ಕೂಡ ಇನ್ನೂ ಕಾಮಗಾರಿ ಪ್ರಾರಂಭ ಆಗದೇ ಇರಲು ಕಾರಣಗಳೇನು;

ಆ) ಹಾಗಿದ್ದಲ್ಲಿ, ಈ ರೀತಿ ವಿಳಂಬ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇನ್ನು ಎಷ್ಟು ದಿನದಲ್ಲಿ ಈ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಉತ್ತರ ಕನ್ನಡ ಜಿಲ್ಲೆ ಭಟ್ಕಳದಲ್ಲಿ ಹೊಸ ಬಸ್ ಘಟಕ ನಿರ್ಮಿಸಲು ಅರಣ್ಯ ಇಲಾಖೆಯಿಂದ ಮೊದಲನೇ ಹಂತದ ಮಂಜೂರಾತಿಯಲ್ಲಿ 01 ಹೆಕ್ಟೇರ್ ಅರಣ್ಯ ಭೂಮಿಯನ್ನು ₹ 11,84,000 ಗಳನ್ನು ಪಾವತಿಸಿ, ಅರಣ್ಯ ಭೂಮಿಯ ಹದ್ದುಬಸ್ತು ಗುರುತಿಸಲು ₹ 14.25 ಲಕ್ಷಗಳ ವೆಚ್ಚದಲ್ಲಿ ಸುತ್ತುಗೋಡೆ ನಿರ್ಮಿಸಲಾಗಿರುತ್ತದೆ.

ಬಸ್ ಘಟಕ ನಿರ್ಮಾಣಕ್ಕೆ ಬೇಕಾಗಿರುವ ಅರಣ್ಯ ಭೂಮಿಯನ್ನು ಸಾರಿಗೆ ಸಂಸ್ಥೆಯ ವಶಕ್ಕೆ ಪಡೆದುಕೊಳ್ಳುವ ಪ್ರಕ್ರಿಯೆ